G & WC NO. 93/2023
PW –1 .
Dated 06–06–2026.

ಸಾಕ್ಷಿಯನ್ನು ಈ ದಿನ ದಿನಾಂಕ 06–06–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ಎದುರುದಾರಳ ಪರವಾಗಿ ಶ್ರೀ ಐ ಡಿ ಡಬ್ಲೂ ವಕೀಲರಿಂದಃ

ನನ್ನ ಮಗುವಿಗೆ ಈಗ ಯಾರು ಯಾರು ಸ್ನೇಹಿತರು ಮತ್ತು ಎಷ್ಟು ಜನ ಸ್ನೇಹಿತರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ಮಗು ಯಾವ ಶಾಲೆಯಲ್ಲಿ ಓದುತ್ತಿದ್ದಾನೆ ಎಂದರೆ ಶಾಲೆ ಹೆಸರು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮಗುವಿಗೆ ಈಗ ಜ್ವರ ಅಥವಾ ಏನಾದರು ಅನೊರೋಗ್ಯ ಇದ್ದಾಗ ಯಾವ ವೈದ್ಯರು ನೊಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಗು ಜನಿಸಿದ ದಿನದಿಂದ ಆತ ತನ್ನ ತಾಯಿ ಜೊತೆಯಲ್ಲಿ ವಾಸವಿದ್ದಾನೆ ಎಂದರೆ ಸರಿಯಲ್ಲ. ಹೀಗಾಗಿ ನನಗೆ ಮಗುವಿಗೆ ಎಷ್ಟು ಜನ ಮತ್ತು ಯಾರು ಯಾರು ಸ್ನೇಹಿತರು, ಆತನ ಶಾಲೆ ಹೆಸರು ಹಾಗೂ ಆತನಿಗೆ ಉಪಚಾರ ನೀಡುವ ವೈದ್ಯರು ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅವನ ಬಗ್ಗೆ ನನಗೆ ಯಾರು ಏನು ಹೇಳುತ್ತಿಲ್ಲ ಮತ್ತು ನನ್ನೊಂದಿಗೆ ಮಗು ಸಂಪರ್ಕದಲ್ಲಿ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಮಗು ಈಗ ಶಾಲೆಗೆ ಹೊಗುತ್ತಿದ್ದಾನೆ ಎಂದು ನನಗೆ ಗೊತ್ತಿರುತ್ತದೆ. ಸದರಿ ಮಗುವಿನ ಶಾಲೆ ಶುಲ್ಕ ಪಾವತಿಸಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಎದುರುದಾರಳ ತಂದೆ ಕೈಯಲ್ಲಿ ಮಗುವಿನ ಶಾಲಾ ಶುಲ್ಕವನ್ನು ಪಾವತಿಸಲು ಹಣ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

G & WC NO. 93/2023
PW -1 .
Dated 06-06-2026.

ನಾನು ಹೇಳುತ್ತಿರುವಂತೆ ಎದುರುದಾರಳ ತಂದೆ ಕೈಯಲ್ಲಿ ಯಾವುದೇ ಹಣ ಕೊಟ್ಟಿಲ್ಲ ಮತ್ತು ಮಗುವಿನ ಶಾಲಾ ಶುಲ್ಕ ಪಾವತಿಸಲು ನಾನು ಯಾವುದೇ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಗುವಿನ ಜನ್ಮ ದಿನಾಂಕದ ಕಾರ್ಯಕ್ರಮಕ್ಕೆ ನಾನು ಯಾವತ್ತು ಬಾಗಿ ಆಗಿರುವುದಿಲ್ಲ. ಈಗ ಮಗು ತನ್ನ ತಾಯಿಯ ಸಂರಕ್ಷಣೆಯಲ್ಲಿ ಒಳ್ಳೆಯ ವಾತಾವರಣದಲ್ಲಿ ಬೆಳೆಯುತ್ತಿದ್ದಾನೆ ಎಂದರೆ ಸರಿಯಲ್ಲ. ಹೀಗಾಗಿ ಮಗುವಿಗೆ ಎದುರುದಾರಳಿಂದ ಬೇರ್ಪಡಿಸಿದರೆ ಮಗುವಿನ ಮೆಲೆ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಮೇಲೆ ಪರಿಣಾಮ ಬಿರುತ್ತದೆ ಎಂದರೆ ಸರಿಯಲ್ಲ. ನಾನು ಎದುರುದಾರಳಿಗೆ ನನ್ನ ಜೊತೆ ಯಲ್ಲಿ ಇದ್ದಾಗ ಅವಳಿಗೆ ಅವಾಚ್ಯ ಶಬ್ದಗಳಿಂದ ಬಯ್ಯುವುದು ಹೊಡೆ ಬಡೆ ಮಾಡುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈಗ ನಾನು ಎದುರುದಾರಳಿಗೆ ಉದ್ದೇಶ ಪೂರ್ವಕವಾಗಿ ತೊಂದರೆ ಕೊಡಬೇಕೆಂದು ಪ್ರಸ್ತುತ ಸುಳ್ಳು ಅರ್ಜಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಮಗುವಿನ ಒಳ್ಳೆಯ ಬೆಳವಣಿಗೆಗೆ ಎದುರುದಾರಳು ಸೂಕ್ತ ವ್ಯಕ್ತಿ ಎಂದರೆ ಸರಿಯಲ್ಲ.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.